<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.92/2020</u>

ದಿಃ 25.02.2022

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-5 Pw-8

| | | |
|---|---|---|
| ಹೆಸರು | ಃ | ಸುನೀತ |
| ಗಂಡನ ಹೆಸರು | ಃ | ಅಶೋಕ್ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಚನ್ನಪಟ್ಟಣ ಟೌನ್ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಚಾಸಾ.1ರಿಂದ 4, 6ರಿಂದ 8ರವರು ಗೊತ್ತು. ಚಾಸಾ.9 ನನ್ನ ಪತಿ. ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಿರುವ ಆರೋಪಿ ಗೊತ್ತು.

2. ಸಂತೆಮೊಗೇನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಚಾಸಾ.1ರವರು ಜಮೀನು ಖರೀದಿಸಿದ್ದು ಅದರ ಹದ್ದುಬಸ್ತಿಗಾಗಿ ಕಲ್ಲುಗಳನ್ನು ನೆಡಲು ನಾನು, ಚಾಸಾ.1ರಿಂದ 4, 6ರಿಂದ 9ರವರು ದಿಃ25.02.2020ರಂದು ಬೆಳಿಗ್ಗೆ ಹೋಗಿದ್ದೆವು. ನಾವು ಕಲ್ಲು ನೆಟ್ಟು ಮನೆಗೆ ಸಂಜೆ ಹೋಗುತ್ತಿದ್ದಾಗ 3 ಜನ ಆರೋಪಿಗಳು ಬಂದು ನೀವುಗಳು ಯಾರು, ನಾನು ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಂದು, ನಿಮಗೆ ಬದುಕಲು ಬಿಡುವುದಿಲ್ಲ ಎಂದು 1ನೇ ಆರೋಪಿ ಬೆದರಿಕೆ ಹಾಕಿದರು. 1ನೇ ಆರೋಪಿ ಚಾಸಾ.1ರವರಿಗೆ ಹೊಡೆಯಲು

ಹೋದಾಗ ಚಾಸಾ.4 ರವರಿಗೆ ಕತ್ತಿನ ಮೇಲೆ ಹೊಡೆದಿದ್ದು, ಅವರನ್ನು ಬಿಡಿಸಲು ನಾನು, ಚಾಸಾ.2 ಮತ್ತು 3 ಹೋದಾಗ ಆರೋಪಿಗಳು ನಮ್ಮನ್ನೂ ತಳ್ಳಿ ಕೆಟ್ಟ ಕೆಟ್ಟದಾಗಿ ನೀವು ಕೀಳು ಜಾತಿಯವರು, ಕ್ರಿಶ್ಚಿಯನ್ ಜಾತಿಯವರು ಎಂದೆಲ್ಲಾ ಬೈದಿರುತ್ತಾರೆ. ಆರೋಪಿಗಳು ನೀವು ಕಟ್ಟಡ ಕಟ್ಟಲು ಬಿಡುವುದಿಲ್ಲ, ಕಟ್ಟಿದರೆ ಸುಟ್ಟು ಹಾಕುತ್ತೇವೆಂದು ಬೆದರಿಕೆ ಹಾಕಿದರು. ನಾವು ಆಗ ತುಂಬಾ ಹೆದರಿದ್ದೆವು. ಸ್ಥಳದಲ್ಲಿದ್ದ 3 ಜನ ಸಾರ್ವಜನಿಕರು ನಮ್ಮನ್ನು ಮನೆಗೆ ಹೋಗುವಂತೆ ಹೇಳಿ ಕಳಿಸಿರುತ್ತಾರೆ. 1 ನೇ ಆರೋಪಿಯ ಜೊತೆಯಲ್ಲಿ ಸುಮಾರು 15 ಜನ ಬಂದಿದ್ದು ಅವರೆಲ್ಲರೂ ಮದ್ಯಪಾನ ಮಾಡಿದ್ದರು. ನನಗೆ ಅಲ್ಲಿ ಬಂದಿದ್ದವರೆಲ್ಲರನ್ನೂ ಗುರುತಿಸಲು ಬರುವುದಿಲ್ಲ. ಅವರು ಬಾಡು ಕಟ್ಟುತ್ತೀರಾ ಎಂದು ಬೈಯ್ಯುತ್ತಿದ್ದರು. ನಂತರವೂ ನಾವು ಮನೆಗೆ ಹೋಗಿ ಸುಮ್ಮನಿದ್ದೆವು. ನಂತರ ರಾತ್ರಿ 9.00 ಗಂಟೆಯಲ್ಲಿ ಆರೋಪಿಗಳು ಹದ್ದುಬಸ್ತಿಗೆ ಹಾಕಿದ್ದ ಕಲ್ಲುಗಳನ್ನು ಒಡೆದು ಹಾಕಿದ್ದು ತಿಳಿಯಿತು.

<u>ಪಾಟೀ ಸವಾಲುಃ ಶ್ರೀ. ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಾನು ಬೆಸ್ತ ಜನಾಂಗಕ್ಕೆ ಸೇರಿದವಳಿದ್ದು, ಎಸ್.ಸಿ., ಎಸ್.ಟಿ., ಬರುವುದಿಲ್ಲ ಎನ್ನುವುದು ಸರಿ. ನಾನು ಮದುವೆ ಆಗುವ ಮುನ್ನ ನಮ್ಮ ಊರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ. ಘಟನೆಯ ದಿನಕ್ಕೆ ನಾನು ಮದುವೆಯಾಗಿ ಸುಮಾರು 5 ವರ್ಷ ಆಗಿತ್ತು. ನನಗೆ ಚಾಸಾ.1 ರವರು ಚರ್ಚ್ ನಲ್ಲಿ ಪ್ರಾರ್ಥನೆಗೆ ಹೋದಾಗ

ಪರಿಚಯವಿರುತ್ತಾರೆ. ನಾನು ಕ್ರಿಶ್ಚಿಯನ್ ಜನಾಂಗಕ್ಕೆ ಧರ್ಮ ಪರಿವರ್ತನೆ ಹೊಂದಿಲ್ಲ, ಆದರೆ ಪ್ರಾರ್ಥನೆಗೆ ಚರ್ಚ್ ಗೆ ಹೋಗುತ್ತೇನೆ. ನನಗೆ ಚಾಸಾ.1 ರಿಂದ 4 ಸುಮಾರು 8 ವರ್ಷಗಳಿಂದ ಪರಿಚಯ. ನಾನು, ಚಾಸಾ.2, 3, 6 ರಿಂದ 9 ರವರು ಚಾಸಾ.1 ರವರ ಚರ್ಚ್ ಗೆ ಪ್ರಾರ್ಥನೆಗೆ ಹೋಗುತ್ತಿದ್ದೆವು. ಚಾಸಾ.4 ರವರದ್ದು ಪ್ರತ್ಯೇಕ ಚರ್ಚ್ ಇದೆ. ಚಾಸಾ.1 ರವರು ಪ್ರಾರ್ಥನೆಗಾಗಿ ಚರ್ಚ್ ಗೆ ಬರುವಂತೆ ಕರೆಯುತ್ತಿದ್ದರು ಎಂದರೆ ನಾವೇ ಸ್ವಯಿಚ್ಛೆಯಿಂದ ಹೋಗುತ್ತಿದ್ದೆವು ಎಂದು ನುಡಿಯುತ್ತಾರೆ. ನಾವು ಏಸು ಆರಾಧನೆ ಮಾಡುತ್ತೇವೆ.

2. ಪೊಲೀಸರು ಈ ಪ್ರಕರಣದಲ್ಲಿ ಪ್ರಶ್ನಿತ ಘಟನೆಯ 2 ತಿಂಗಳ ನಂತರ ವಿಚಾರಣೆ ಮಾಡಿರುತ್ತಾರೆ. ನಾನು ಪೊಲೀಸರ ಮುಂದೆ ಕ್ರಿಶ್ಚಿಯನ್ ಜನಾಂಗಕ್ಕೆ ಪರಿವರ್ತನೆ ಆಗಿರುತ್ತೇನೆ ಎಂದು ಹೇಳಿರುತ್ತೇನೆ ಎನ್ನುವುದು ಸರಿಯಲ್ಲ.

3. ಆರೋಪಿಗಳು ನನಗೆ ಘಟನೆಯ ದಿನದಂದೇ ಪರಿಚಯವಾಗಿರುತ್ತಾರೆ, ಆ ಮುನ್ನ ನಾನು ಅವರನ್ನು ನೋಡಿರಲಿಲ್ಲ. ಘಟನೆಯ ಮುನ್ನ ನನ್ನ ಬಗ್ಗೆ ಆರೋಪಿಗಳಿಗಾಗಲೀ, ಆರೋಪಿಗಳ ಬಗ್ಗೆ ನನಗಾಗಲೀ ತಿಳಿದಿರಲಿಲ್ಲ ಎನ್ನುವುದು ಸರಿ.

4. ಈ ಪ್ರಕರಣದಲ್ಲಿ ಕಲ್ಲು ನೆಡಲು ಹೋಗಿದ್ದ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಸದರಿ ಜಮೀನಿನ ಚಕ್ಕುಬಂದಿ ಸಹ ನನಗೆ ಗೊತ್ತಿಲ್ಲ.

5. ನಮ್ಮ ಸ್ವಂತ ಊರು ಮಂಡ್ಯ ಬಳಿ ಗೌಡಗೆರೆ ಇರುತ್ತದೆ. ನಾನು ಗೋಬಿ ಮಂಚೂರಿ ವ್ಯಾಪಾರ ಮಾಡುತ್ತಿದ್ದೇನೆ ಎನ್ನುವುದು ಸರಿ. ನಮ್ಮ ಸುಣ್ಣಘಟ್ಟ ಗ್ರಾಮ ನೀಲಸಂದ್ರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಘಟನೆಯ ದಿನದಂದು ಬಂದಿದ್ದ 15-20 ಜನರ ಹೆಸರು, ವಿಳಾಸ ಅಥವಾ ಗುರುತು ಹೇಳಲು ನನಗೆ ಬರುವುದಿಲ್ಲ. ಅವರಲ್ಲಿ ಎಲ್ಲರೂ ಗಂಡಸರೇ ಇದ್ದರು.

6. ಘಟನೆಯ ನಂತರ ನಾನು ಚನ್ನಪಟ್ಟಣ ಟೌನ್‌ಗೆ ಹಿಂದಿರುಗಿದೆ. ಆ ಸಮಯದಲ್ಲಿ ಯಾವುದೇ ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ದೂರು ನೀಡಲು ಯತ್ನಿಸಲಿಲ್ಲ. ನಾನು ಮಾರನೇ ದಿನವೂ ಯಾವುದೇ ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ದೂರು ನೀಡಲು ಯತ್ನಿಸಲಿಲ್ಲ.

7. ಆರೋಪಿಗಳು ಕಲ್ಲು ಒಡೆದು ಹಾಕಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ನಮ್ಮನ್ನು ಘಟನಾ ಸ್ಥಳದಿಂದ ಕಳುಹಿಸಿದ 3 ಜನ ಸಾರ್ವಜನಿಕರು ಯಾರು ಎಂದು ನನಗೆ ಗೊತ್ತಿಲ್ಲ.

8. ನಾನು 26ನೇ ತಾರೀಖಿನಂದು ಪೊಲೀಸ್ ಠಾಣೆಗೆ ಹೋಗಿದ್ದೆ. ಆಗ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆಗ ಪೊಲೀಸ್ ಇನ್ಸ್ ಪೆಕ್ಟರ್ ಇದ್ದರು. ನನ್ನ ಸಹಿಯನ್ನು ಪಡೆದಿರುತ್ತಾರೆ.

9. ಚಾಸಾ.1 ಮತ್ತು 2ರವರು ಹಿಂದೂ ಜನಾಂಗದವರನ್ನು ಕ್ರಿಶ್ಚಿಯನ್ ಸಮುದಾಯಕ್ಕೆ ಧರ್ಮ ಪರಿವರ್ತನೆ ಮಾಡುವ ಕೆಲಸ

ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಚಾಸಾ.1 ರವರು ಘಟನೆ ನಡೆದ ಭೂಮಿಯನ್ನು ಚರ್ಚ್ ಕಟ್ಟಲು ಖರೀದಿಸಿದ್ದರು ಎನ್ನುವುದು ಸರಿಯಲ್ಲ. ನನ್ನ ಮತ್ತು ನನ್ನ ಪತಿ ಚಾಸಾ.9 ರವರನ್ನು ಕ್ರಿಶ್ಚಿಯನ್ ಆಗಿ ಪರಿವರ್ತನೆ ಮಾಡಿರುತ್ತಾರೆ ಎನ್ನುವುದು ಸರಿಯಲ್ಲ.

10. ನಾವುಗಳು ವಾರಕ್ಕೊಮ್ಮೆ ಮತ್ತು ಆಗಾಗ ಸದರಿ ಜಮೀನಲ್ಲಿ ಸೇರಿ ಮದ್ಯಪಾನ ಮಾಡುವುದು, ಕುಣಿಯುವುದು ಮತ್ತು ಗಲಾಟೆ ಮಾಡುವುದು ಮಾಡುತ್ತಿದ್ದೆವು ಎನ್ನುವುದು ಸರಿಯಲ್ಲ. ಆ ವಿಷಯವಾಗಿ ಗ್ರಾಮಸ್ಥರು ಗಾಮ ಪಂಚಾಯ್ತಿ ಅಧ್ಯಕ್ಷ 1 ನೇ ಆರೋಪಿಗೆ ಮತ್ತು ಇತರೆ ಊರಿನ ಮುಖಂಡರಿಗೆ ನಮ್ಮ ವಿರುದ್ದ ದೂರು ನೀಡಿದ್ದರು ಎನ್ನುವುದು ಸರಿಯಲ್ಲ. ಆ ಕಾರಣಕ್ಕೆ ಚಾಸಾ.1 ಮತ್ತು 2 ರವರಿಗೆ ಈ ರೀತಿ ಮಾಡಬಾರದು ಎಂದು 1 ಮತ್ತು ಇತರೆ ಆರೋಪಿಗಳು ಬುದ್ದಿವಾದ ಹೇಳಿದ್ದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಚಾಸಾ.1, 2 ಮತ್ತು ನಾವುಗಳೆಲ್ಲರೂ ಆರೋಪಿಗಳಿಗೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಬೆದರಿಕೆ ಹಾಕಿದ್ದೆವು ಎನ್ನುವುದು ಸರಿಯಲ್ಲ. ಅದೇ ರೀತಿಯಾಗಿ ನಾವುಗಳೆಲ್ಲರೂ ಮಾತನಾಡಿಕೊಂಡು ಒಂದು ಸೃಷ್ಟಿತ ಘಟನೆಯ ಮೂಲಕ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

11. ನಾನು ಪೊಲೀಸರ ಮುಂದಿನ ಹೇಳಿಕೆಯಲ್ಲಿ ಚಾಸಾ.4, ಚಾಸಾ.1 ರವರ ರಕ್ಷಣೆಗೆ ಹೋದಾಗ 1 ನೇ ಆರೋಪಿ ಕತ್ತಿನ ಮೇಲೆ

ಹೊಡೆದರು ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ. 1ನೇ ಆರೋಪಿ ಮತ್ತು ಇತರರು ನಾವು ಚಾಸಾ.1ರವರ ಜಮೀನಲ್ಲಿ ಕಲ್ಲುಹಾಕಿ ಬರುತ್ತಿದ್ದ ಸಮಯದಲ್ಲಿ ಸಂಜೆ ಅವಾಚ್ಯ ಶಬ್ದದಿಂದ ನಿಂದಿಸಿ, ಜಾತಿ ಹಿಡಿದು ಬೈದು ನಮ್ಮ ಮೇಲೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗಳು ಘಟನೆಯ ದಿನ ರಾತ್ರಿ ನಾವು ನೆಟ್ಟಿದ್ದ ಚಾಸಾ.1ರವರ ಜಮೀನಲ್ಲಿನ ಕಲ್ಲುಗಳನ್ನು ಒಡೆದು ಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ಚಾಸಾ.1 ಮತ್ತು 2ರವರೂ ಸಹ ಬಂದಿರುತ್ತಾರೆ ಎನ್ನುವುದು ಸರಿ.

12. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಷಯ ತಿಳಿಯದಿದ್ದರೂ ಚಾಸಾ.1 ಮತ್ತು 2ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.